Rotary

# JASMINE

ಜಾಸ್ಮಿನ್ | जास्मिन

UNITE FOR GOOD

WEEKLY BULLETIN OF ROTARY CLUB KUNDAPURA SOUTH


Charter No. 23496 | Zone 1, R. I. Dist. 3182 | Charter Date : 04-03-1986



Rtn. Francesco Arezzo
RI President



Rtn. Palaksha K.
Dist. Governor



Rtn. PHF. I. Narayana
Asst. Governor



Rtn. Koushik Yadiyal
Zonal Lieutenant



40h year of Service and Fellowship

Volume 40 Issue - 12 25th September 2025

## ವಾರದ ಸಭೆ


ವಿಷಯ :

**'ರಾಷ್ಟ್ರೀಯ ಆಯುರ್ವೇದ ದಿನ"**

ಮುಖ್ಯ ಅತಿಥಿ :

ರೊ. ರಮಾನಂದ ಕಾರಂತ

Time : 7.00 p.m.
Venue : Hotel Shivaprasad Grand, Kundapura



Rtn. Sachin Nackathaya
President



Rtn. Gerald Crasto
Secretary



Rtn. Ramananda Karanth
Bulletin Editor

We meet every Thursday at 7-30 p.m.
at Sarojini Madhusoodhan D. Kushe Rotary South Hall, Kundapura

# ಸಂಪಾದಕೀಯ :



ರೋಟರಿ ಬಂಧುಗಳೇ,

ನನ್ನೊಲವಿನ ಸಮಸ್ತ ರೋಟರಿ ಬಂಧುಗಳಿಗೆ ನವರಾತ್ರಿ ಶುಭಾಶಯಗಳು. ನವರಾತ್ರಿ ಬಂತೆಂದರೆ ನಮ್ಮ ಕರ್ನಾಟಕದಲ್ಲಿ ಎಲ್ಲರಿಗೂ ಒಂದು ಹೊಸ ಮನ್ವಂತರದಂತೆ. ಅರ್ಧಕ್ಕರ್ಧ ಜನ ಒಂಬತ್ತು ದಿನ ಮಾಂಸಾಹಾರವನ್ನು ತ್ಯಜಿಸಿರುತ್ತಾರೆ. ಇನ್ನೂ ಕೆಲವರು ಕೇವಲ ನೀರನ್ನು ಸೇವಿಸುತ್ತಾ ದಿನಕ್ಕೊಂದೇ ಹೊತ್ತು ಆಹಾರವನ್ನು ಸೇವಿಸುವ ವ್ರತವನ್ನು ಮಾಡುತ್ತಾರೆ. ಒಟ್ಟಿನಲ್ಲಿ ಒಂಬತ್ತು ದಿನವೂ ನಮ್ಮ ಕರ್ನಾಟಕದಲ್ಲಿ ಪವಿತ್ರವಾದ ದಿನವಾಗಿರುತ್ತದೆ ಆ ಜಗನ್ಮಾತೆಯನ್ನು ವಿವಿಧ ರೀತಿಯಲ್ಲಿ ಪ್ರಾರ್ಥಿಸುವ ಶುಭ ಗಳಿಗೆಯಾಗಿರುತ್ತದೆ. ಪ್ರತಿಯೊಬ್ಬನಲ್ಲೂ ಭಕ್ತಿ ಶ್ರದ್ಧೆ ಮನೆಮಾಡಿರುತ್ತದೆ. ಹೆಂಗಸರಂತೂ ದಿನಕ್ಕೊಂದು ಕಲರ್ ಅಂದರೆ ದುರ್ಗೆಗೆ ಸಂಬಂದಿಸಿದ ಒಂಬತ್ತು ಬಣ್ಣದ ಸೀರೆಗಳನ್ನು ಉಟ್ಟು ದಿನಕ್ಕೊಂದು ದೇಗುಲಕ್ಕೆ ಭೇಟಿ ನೀಡುವುದು ವಾಡಿಕೆ. ಶ್ರೀ ದುರ್ಗೆ ಈ ಒಂಬತ್ತು ದಿನಗಳಲ್ಲಿ ಮಹಿಷಾಸುರ, ರಕ್ತ ಬೀಜಾಸುರ, ಶುಂಭನಿಶುಂಭ ಹಾಗೂ ಚಂಡಮುಂಡರನ್ನು ಸಂಹರಿಸಿದ ಪುರಾಣ ರೋಮಾಂಚಕ. ರಾಮ ರಾವಣನನ್ನು ಸಂಹರಿಸಿದ ವಿಜಯ ದಶಮಿ. ಈ ಎಲ್ಲಾ ಆಚರಣೆಗಳು ವಿಜಯನಗರ ಸಾಮ್ರಾಜ್ಯದಿಂದ ಹರಿದು ಬಂದು ಮೈಸೂರು ಒಡೆಯರರವರೆಗೂ ಪಸರಿಸಿ ಇಂದು ನಮ್ಮ ನಾಡ ಹಬ್ಬವಾಗಿದೆ. ನಿಜವಾಗಿಯೂ ಇದೊಂದು ಹಬ್ಬ ಸರ್ವರಿಗೂ ಉದರಂಭರಣೆ ಮಾಡುತ್ತದೆ. ನಮ್ಮ ಹಿಂದೂ ಸನಾತನ ಸಂಪ್ರದಾಯವನ್ನು ಮಾಡಿದ್ದೇ ಹಾಗೆ. ನವರಾತ್ರಿಯಲ್ಲಿ ಆಚರಣೆ ಕೇವಲ ಅರ್ಚಕ ಹಾಗೂ ದೇವರಿಗೊಂದೇ ಸಂಬಂಧಿಸಿದ್ದಲ್ಲ, ಹಣಕಾಸಿನ ರೊಟೇಶನ್. ಹಣ್ಣು ಕಾಯಿಯ ವ್ಯಾಪಾರಿಗೆ, ಗ್ರಾಸರಿ ವ್ಯಾಪಾರಿಗೆ, ಕೃಷಿಕನಿಗೆ, ವಾಹನ ವ್ಯಾಪಾರಿಗೆ, ಟ್ಯಾಕ್ಸಿ, ಬಸ್ಸು, ಹಣ್ಣಿನ ಅಂಗಡಿ, ಹೂವಿನ ಅಂಗಡಿ, ತರಕಾರಿ, ಕೇಟರಿಂಗ್, ಬಟ್ಟೆ ಅಂಗಡಿ, ಗೃಹಬಳಕೆ ವಸ್ತುಗಳ ಶೋರೂಂ ಇತ್ಯಾದಿ ಎಲ್ಲರಿಗೂ ವ್ಯಾಪಾರ. ಪ್ರೀತಿ ವಿಶ್ವಾಸ ವೃದ್ಧಿಸಲು ಈ ನವರಾತ್ರಿಯೊಂದೇ ಸಾಕು. ಊರಿಗೆ ಹೊರ ಊರಿನಲ್ಲಿ ಓದುತ್ತಿರುವ, ಉದ್ಯೋಗದಲ್ಲಿರುವ ಮಕ್ಕಳು ಆಗಮಿಸುತ್ತಾರೆ. ಮನೆಯಲ್ಲಿ ಸಂಭ್ರಮ ಇತ್ಯಾದಿ. ಇದು ನವರಾತ್ರಿಯ ಸ್ಪೆಶಲ್. ಇದೇರೀತಿ ನಮ್ಮ ರೋಟರಿಯ ಸಮಸ್ತ ಭಾಂದವರಿಗೂ ಅವರ ಕುಟುಂಬಕ್ಕೆ ಸಂಬ್ರಮವನ್ನು ಈ ನವರಾತ್ರಿ ತರಲಿ ಸರ್ವರಿಗೂ ಆ ಜಗನ್ಮಾತೆ ಸನ್ಮಂಗಳವನ್ನು ಅನುಗ್ರಹಿಸಲಿ ಎಂದು ಹಾರೈಸುತ್ತೇನೆ.

**– ರೊ. ರಮಾನಂದ ಕಾರಂತ್**

## ವಾರದ ಸಭೆಯ ವರದಿ
















ತಾ. 18/09/2025 ರಂದು ನಮ್ಮ ಕ್ಲಬ್ಬಿನ ಕುಟುಂಬ ಮಿಲನ ವಡೇರಹೋಬಳಿಯ ಫಿಲೋಮಿನಾ ಹಾಲ್‌ನಲ್ಲಿ ವಿಜೃಂಭಣೆಯಿಂದ ನೆರವೇರಿತು. ಈ ಕುಟುಂಬ ಮಿಲನ 2024–25ರ ಸಾಲಿನ **"ಬೆಸ್ಟ್ ಕ್ಲಬ್ ಅವಾರ್ಡ್"** ಜಯಿಸಿದ ಸಂಭ್ರಮವನ್ನು ಹಂಚಿಕೊಳ್ಳುವ ಹಾಗೂ ನಮ್ಮ ಯಶೋಘಾತೆಯನ್ನು ಮೆಲುಕು ಹಾಕುವ ಕಾರ್ಯಕ್ರಮವಾಗಿತ್ತು ರೊ. ಕೆ. ಕೆ. ಕಾಂಚನ್ 2024–25ರ ಸಾಲಿನ ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾ ಹಾಗೂ ರೊ. ಭರತ್ ಶೆಟ್ಟಿ ತಂಡಕ್ಕೆ ಅವರ ಸಾಧನೆಗಳಿಗೆ ಮೆಚ್ಚುಗೆಯನ್ನು ಹಾಗೂ ಅಭಿನಂದನೆಯನ್ನು ತಮ್ಮ ಭಾಷಣದಲ್ಲಿ ವ್ಯಕ್ತ ಪಡಿಸಿದರು . ರೊ. ಜುಡಿತ್ ಮೆಂಡೋನ್ಸಾ ಹಾಗೂ ರೊ. ಭರತ್ ಶೆಟ್ಟಿ ತಮ್ಮ ಮನದಾಳದ ಮಾತುಗಳಿಂದ ಧನ್ಯವಾದ ಅರ್ಪಿಸಿದರು. ಈ ಕಾರ್ಯಕ್ರಮದ ಪ್ರಾಯೋಜಕರುಗಳಾದ ರೊ. ವಿಜಯ್ ಶೆಟ್ಟಿ, ರೊ. ಕೆ. ಕೆ. ಕಾಂಚನ್, ರೊ. ವಿವಿಯನ್ ಕ್ರಾಸ್ತಾ, ರೊ. ಮಹೇಂದ್ರ ಶೆಟ್ಟಿ, ರೊ. ಜಾನ್ಸನ್ ಆಲ್ಮೇಡಾ, ರೊ. ಅರುಣ್ ಮೆಂಡೋನ್ಸಾ ಹಾಗೂ ರೊ. ರೇಗನ್ ಲೋಬೋ ಇವರುಗಳನ್ನು ಗುರುತಿಸಿ ಅಭಿನಂದಿಸಲಾಯಿತು. ಆಗಮಿಸಿದ ಸರ್ವ ಸದಸ್ಯರನ್ನು ರೊ. ಸಚಿನ್ ನಕ್ಕತ್ತಾಯ ಸ್ವಾಗಸಿದರು. ರೊ. ಜೆರಾಲ್ಡ್ ಕ್ರಾಸ್ತಾ ವಾರದ ವರದಿ ವಾಚಿಸಿದರು. ರೊ. ಶ್ರೀನಿವಾಸ ಶೇಟ್ ಪ್ರಾರ್ಥನೆ ನೆರವೇರಿಸಿದರು. ರೊ. ವಿವಿಯನ್ ಕ್ರಾಸ್ತಾ ವಾರದ ಚಿಂತನೆ ಮಂಡಿಸಿದರು. ರೊ. ವಾಸುದೇವ ಕಾರಂತ್ ರೋಟರಿ ಮಾಹಿತಿ ತಿಳಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ಹಾಸ್ಯವನ್ನು ರೊ. ಸತ್ಯನಾರಾಯಣ ಪುರಾಣಿಕ್ ನೆರವೇರಿಸಿದರು. ರೊ. ಮನೋಹರ್ ಭಟ್ ಧನ್ಯವಾದ ಅರ್ಪಿಸಿದರು.

## ಕುಂದಾಪುರದಲ್ಲಿ ಉಚಿತ ಗರ್ಭಕೋಶ ಮತ್ತು ಚರ್ಮ ರೋಗ ತಪಾಸಣಾ ಶಿಬಿರಕ್ಕೆ ಉತ್ತಮ ಸ್ಪಂದನೆ






ತಾ.23/09/2025 ರಂದು ರೋಟರಿ ಕ್ಲಬ್ ಕುಂದಾಪುರ ದಕ್ಷಿಣ ಹಾಗೂ ಇನ್ನರ್ ವೀಲ್ ಕ್ಲಬ್ ಕುಂದಾಪುರ ದಕ್ಷಿಣ ಇವರ ಜಂಟಿ ಆಶ್ರಯದಲ್ಲಿ ಸರಕಾರಿ ಆಸ್ಪತ್ರೆಯಲ್ಲಿ **“ಸ್ವಸ್ಥ ನಾರಿ– ಸಶಕ್ತ ಪರಿವಾರ ಅಭಿಯಾನ”** ಎಂಬ ಕಾರ್ಯಕ್ರಮದಡಿಯಲ್ಲಿ ಸ್ತ್ರೀಯರಿಗೆ ಗರ್ಭಾಶಯ ಕೊರಳಿನ ಕ್ಯಾನ್ಸರ್ ಹಾಗೂ ಚರ್ಮರೋಗದ ಬಗ್ಗೆ ಉಚಿತ ಆರೋಗ್ಯ ತಪಾಸಣೆಯನ್ನು ನಡೆಸಲಾಯಿತು. ಆರೋಗ್ಯ ಸೇವೆಗಳು ಪ್ರತಿಯೊಬ್ಬರಿಗೂ ತಲುಪುವ ಸದುದ್ದೇಶದಿಂದ, ರೋಟರಿ ಕ್ಲಬ್ ಕುಂದಾಪುರ ದಕ್ಷಿಣ ಮತ್ತು ಇನ್ನರ್‌ವೀಲ್ ಕ್ಲಬ್ ಕುಂದಾಪುರ ಸೌತ್ ಜಂಟಿ ಆಶ್ರಯದಲ್ಲಿ ಸಾರ್ವಜನಿಕ ಆಸ್ಪತ್ರೆ ಕುಂದಾಪುರದ ಸಹಯೋಗದೊಂದಿಗೆ ಉಚಿತ ಗರ್ಭಕೋಶ ಕ್ಯಾನ್ಸರ್ ಪತ್ತೆ ಮತ್ತು ಚರ್ಮ ರೋಗ ತಪಾಸಣಾ ಶಿಬಿರವನ್ನು ಯಶಸ್ವಿಯಾಗಿ ಆಯೋಜಿಸಲಾಯಿತು. ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ ನಡೆದ ಈ ಮಹತ್ವದ ಶಿಬಿರಕ್ಕೆ ಜನಸಾಮಾನ್ಯರಿಂದ ಉತ್ತಮ ಸ್ಪಂದನೆ ವ್ಯಕ್ತವಾಯಿತು.

ಶಿಬಿರದ ಅಧ್ಯಕ್ಷತೆಯನ್ನು ವಹಿಸಿದ್ದ ರೋಟರಿ ಕ್ಲಬ್ ಕುಂದಾಪುರ ದಕ್ಷಿಣದ ಅಧ್ಯಕ್ಷರಾದ ರೊ. ಸಚಿನ್ ನಕ್ಕತ್ತಾಯ ಅವರು ನೆರೆದಿದ್ದವರನ್ನು ಆತ್ಮೀಯವಾಗಿ ಸ್ವಾಗತಿಸಿ, ಇಂತಹ ತಪಾಸಣಾ ಶಿಬಿರಗಳು ಸಮುದಾಯದ ಆರೋಗ್ಯ ರಕ್ಷಣೆಯಲ್ಲಿ ನಿರ್ವಹಿಸುವ ಮಹತ್ವದ ಪಾತ್ರದ ಬಗ್ಗೆ ವಿವರಿಸಿದರು. ಶ್ರೀಮತಿ ವೀಣಾ ಸಿ.ಹೆಚ್.ಓ (CHO) ರವರು ಕಾರ್ಯಕ್ರಮ ನಿರೂಪಣೆ ಮಾಡಿದರು. ಈ ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಸಾರ್ವಜನಿಕ ಆಸ್ಪತ್ರೆ ಮತ್ತು ಕೆಎಂಸಿ (KMC) ಆಸ್ಪತ್ರೆಯ ಪ್ರಮುಖ ವೈದ್ಯರ ತಂಡ ಉಪಸ್ಥಿತರಿದ್ದರು. ಸಾರ್ವಜನಿಕ ಆಸ್ಪತ್ರೆಯ ಸ್ತ್ರೀ ರೋಗ ತಜ್ಞರಾದ ಡಾ. ಕಾವ್ಯಾ ಮತ್ತು ಡಾ. ವೀಣಾ, ಜನರಲ್ ಫಿಜಿಷಿಯನ್ ಡಾ. ನಾಗೇಶ್, ದಂತ ವೈದ್ಯರಾದ ಡಾ. ಬಸ್ಸು ನಾಯ್ಕ್, ನೇತ್ರ ತಜ್ಞರಾದ ಡಾ. ವಿಜಯಲಕ್ಷ್ಮಿ, ಕೆಎಂಸಿ ಆಸ್ಪತ್ರೆಯಿಂದ ಆಗಮಿಸಿದ್ದ ಡಾ. ರಕ್ಷಿತಾ ಶೆಣೈ ಹಾಗೂ ಮಾಟ್ರಾನ್ ಅನ್ನಪೂರ್ಣ ಗೌರವ ಉಪಸ್ಥಿತಿ ವಹಿಸಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ಡಾ. ವೀಣಾ, ಡಾ. ಕಾವ್ಯಾ ಮತ್ತು ಡಾ. ಬಸ್ಸು ನಾಯ್ಕ್ ಅವರು ಸಾರ್ವಜನಿಕರಿಗೆ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಿದರು. ಗರ್ಭಕೋಶ ಕ್ಯಾನ್ಸರ್ ಮತ್ತು ಚರ್ಮ ರೋಗಗಳನ್ನು ಆರಂಭಿಕ ಹಂತದಲ್ಲಿಯೇ ಪತ್ತೆ ಹಚ್ಚಿ ಚಿಕಿತ್ಸೆ ಪಡೆಯುವುದು ಎಷ್ಟು ಮುಖ್ಯ ಎಂಬುದರ ಕುರಿತು ವೈದ್ಯರು ಮಾಹಿತಿ ನೀಡಿದರು.

ಕಾರ್ಯಕ್ರಮದ ಕೊನೆಯಲ್ಲಿ, ಇನ್ನರ್‌ವೀಲ್ ಕ್ಲಬ್‌ನ ಅಧ್ಯಕ್ಷರಾದ ಸುಜಾತಾ ನಕ್ಕತ್ತಾಯ ಅವರು ಎಲ್ಲರಿಗೂ ವಂದನಾರ್ಪಣೆ ಮಾಡುವುದರ ಮೂಲಕ ಶಿಬಿರಕ್ಕೆ ತೆರೆ ಎಳೆದರು. ಈ ಸಮಾಜಮುಖಿ ಕಾರ್ಯವು ಸ್ಥಳೀಯ ಜನರಿಗೆ ವರದಾನವಾಯಿತು.



ನಮ್ಮ ರೋಟರಿ ಕ್ಲಬ್ ಕುಂದಾಪುರ ದಕ್ಷಿಣದ ಪಾಸ್ಟ್ ಜಿಲ್ಲಾ ಗವರ್ನರ್ ರೊ. ಸದಾನಂದ ಚಾತ್ರ ಅವರ ದ್ವಿತೀಯ ಪುತ್ರಿ ಚಿ. ಸೌ. ಅನುಷಾ ಅವರು ಚಿ. ಅಭಿಜಿತ್ ಅವರೊಂದಿಗೆ ಸೆಪ್ಟೆಂಬರ್ 5 ರಂದು ದಾಂಪತ್ಯ ಜೀವನಕ್ಕೆ ಕಾಲಿಟ್ಟಿರುತ್ತಾರೆ. ಈ ದಂಪತಿಗಳಿಗೆ ರೋಟರಿ ಕ್ಲಬ್ ಕುಂದಾಪುರ ದಕ್ಷಿಣದ ವತಿಯಿಂದ ಹೃತ್ಪೂರ್ವಕ ಅಭಿನಂದನೆಗಳು ಹಾಗೂ ಶುಭಾಶಯಗಳು.

### ವಾರದ ಚಿಂತನೆ

**ಆದರ್ಶ ಕುಟುಂಬ :** ಯಾರಾದರೂ “ಇಂತಹ ಮಕ್ಕಳನ್ನು ಪಡೆದಿರುವ ನಾವು ಧನ್ಯರು” ಎಂದು ಹೇಳಿದರೆ ನಿಜವಾಗಿಯೂ ಆ ಕುಟುಂಬ 100% ಆದರ್ಶ ಕುಟುಂಬವಾಗಿರುವುದಿಲ್ಲ. ಬದಲಿಗೆ “ಇಂತಹ ಹೆತ್ತವರನ್ನು ಪಡೆದಿರುವ ನಾವು ಪುಣ್ಯವಂತರು” ಎಂದು ಹೇಳುವ ಮಕ್ಕಳಿರುವ ಕುಟುಂಬವೇ 100% ಆದರ್ಶ ಕುಟುಂಬವಾಗಿರುತ್ತದೆ. **– ರೊ. ವಿವಿಯನ್ ಕ್ರಾಸ್ತಾ**

### ಹುಟ್ಟುಹಬ್ಬದ ಶುಭಾಶಯಗಳು



**ರೊ. ಅರುಣ್ ಮೆಂಡೋನ್ಸಾ**
**ದಿನಾಂಕ : ಸೆಪ್ಟೆಂಬರ್ 30**
**ಮೊಬೈಲ್ : 98451 37656**

“Perfection is not attainable. But if we chase perfection we can catch excellence.”
**—Vince Lombardi**


Rtn. Dr. S. N. Padiyar
1985-86 & 1986-87


Rtn. B. Arun Kumar Shetty
1987-88


Rtn. Dr. H. Rammohan
1988-89


Rtn. K. Shridhar Kamath
1989-90


Rtn. Dr. Anand Nayak
1990-91


Rtn. B. Ramachandra Prabhu
1991-92


Rtn. G. Santhosh Kumar Shetty
1992-93


Rtn. Dr. H. A. Vishweshwar
1993-94


Rtn. Dr. H. R. Hebbar
1994-95


Rtn. K. T. Surendranath
1995-96


Rtn. B. C. Somayaji
1997-98


Rtn. S. Subraya Halambi
1999-2000


Rtn. K. Seetharama Nackathaya
2001-02


Rtn. Dr. Umesh Puthran
2003-04


Rtn. A. Shantharam Pai
2005-06

## Rotary Information

**Rotary Theme For September Month**

Rotary has a specific theme for each months in a Rotary Year. Last month ie August was meant for Membership Development, this month is for Basic education and Literacy. October month is for Economic and Community development and November for TRF.

In the month of September Rotary's commitment is to support education and literacy for people of all ages,aiming to strengthen communities, reduce gender disparity and increase adult literacy.

We Rotarians can get involved to reach the goals of basic education and literacy by

1) Donating books ,time or money to literacy programs .
2) Spread awareness about the importance of literacy in Social media
3) Support or launch new literacy projects
4) Invite guest speakers to discuss literacy and education.

Let us move in the above direction in this month.


Birthday Celebration of Rtn. Ramesh K.

**THE ROTARY 4-WAY TEST**

1. Is it the truth?
2. Is it fair to all concerned?
3. Will it build goodwill and better friendships?
4. Will it be beneficial to all concerned?

### ಸದಸ್ಯರ ಗಮನಕ್ಕೆ

ಈ ವಾರದ ಸಭೆಯು ಶಿವಪ್ರಸಾದ ಗ್ರ್ಯಾಂಡನಲ್ಲಿ ನಡೆಯಲಿದೆ. ನಮ್ಮ ಕ್ಲಬ್ಬಿನ ಸಕ್ರಿಯ ಸದಸ್ಯ ರೊ. ರಮಾನಂದ ಕಾರಂತ್ ಈ ವಾರದ ಸಭೆಯ ಮುಖ್ಯ ಅತಿಥಿಯಾಗಿದ್ದು, "ರಾಷ್ಟ್ರೀಯ ಆಯುರ್ವೇದ ದಿನ" ಈ ವಿಷಯದ ಕುರಿತು ಮಾತನಾಡಲಿದ್ದಾರೆ. ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕಾಗಿ ವಿನಂತಿ.

*This Bulletin is sponsored by :*
Rtn. Jayakar Shetty
Mob. : 9448488232
For Private Circulation only

Email id – rotaryclub.kundapurasouth@gmail.com


Rtn. S. Sadananda Chatra
1996-97


Rtn. K. Suresh Kamath
1998-99


Rtn. S. Vijaya Shetty
2000-01


Rtn. U. S. Shenoy
2002-03


Rtn. Dr. B. V. Udupa
2004-05


Rtn. K. Shantharam Prabhu
2006-07


Rtn. T. Raghavendra Hatwar
2007-08


Rtn. K. Shankar
2008-09


Rtn. S. Jayakar Shetty
2009-10


Rtn. K. K. Kanchan
2010-11


Rtn. Abhinandan A. Shetty
2011-12


Rtn. Vivian Crasto
2012-13


Rtn. G. Shreedhar Shetty
2013-14


Rtn. K. P. Bhat
2014-15


Rtn. P. Vasudeva Karanth
2015-16


Rtn. Aouzline F. Rebello
2016-17


Rtn. J. Srinath Rao
2017-18


Rtn. Johnson D' Almeida
2018-19


Rtn.Devaraj
2019-20


Rtn. Dr. Uttam Kumar Shetty
2020-21


Rtn.Mahendr Shetty
2021-22


Rtn.Sathyanarayana Puranik
2022-23


Rtn.Suresh Mallya
2023-24


Rtn. Judith Mendonca
2024-25